# <u>ಮೆಃ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ  ಜೆ.ಎಂ.ಎಫ್.ಸಿ ನ್ಯಾಯಾಲಯ,</u>
# <u>ಮುಧೋಳ.</u>

C.C.No. 1240/2018.

CW7/PW3.

| | |
|---|---|
| ಹೆಸರು | ರಾಜಶೇಖರ ವಾರದ |
| ತಂದೆ  ಹೆಸರು | ಚೆನ್ನಪ್ಪ |
| ವಯಸ್ಸು | 38 ವರ್ಷ |
| ಉದ್ಯೋಗ | ಪಿ.ಡಿ.ಓ ಗ್ರಾಮ ಪಂಚಾಯತ ಇಂಗಳಗಿ |
| ವಾಸಸ್ಥಳ | ಜಮಖಂಡಿ,ತಾಃ ಜಮಖಂಡಿ |

**ದಿನಾಂಕಃ 10-02-2026 ರಂದು ಸಾಕ್ಷಿಯನ್ನು ಕರೆದು ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆ ಃ- ಎ.ಪಿ.ಪಿ ರವರಿಂದ.</u>**

ನಾನು 2011 ರಿಂದ 2023 ರವರೆಗೆ ಮಂಟೂರು ಗ್ರಾಮ ಪಂಚಾಯತಿಯಲ್ಲಿ ಪಿ.ಡಿ.ಓ ಅಂತಾ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ  23.02.2018 ರಿಂದ 25.02.2018  ರವರೆಗೆ ಮುಧೋಳದಲ್ಲಿ ರನ್ನ ವೈಭವವನ್ನು ಆಯೋಜಿಸಲಾಗಿತ್ತು ಮತ್ತು ನನಗೆ ವೇದಿಕೆಯ ಉಸ್ತುವಾರಿಯನ್ನು ವಹಿಸಿಕೊಡಲಾಗಿತ್ತು. ದಿನಾಂಕ 25.02.2018 ರಂದು ಸಮಾರೋಪ ಸಮಾರಂಬ ಏರ್ಪಡಿಸಲಾಗಿತ್ತು ಮತ್ತು ಸದರಿ ದಿನಾಂಕದಂದು ಸಾಯಂಕಾಲ 4-00 ರಿಂದ 6-00 ರವರೆಗೆ ಸ್ಥಳಿಯ ಕಲಾವಿದರಿಗೆ ಅವಕಾಶ, ಸಾಯಂಕಾಲ 7-00 ರಿಂದ 12-00 ರವರೆಗೆ ರಾಜ್ಯ ಮಟ್ಟದ ಕಲಾವಿದರಿಗೆ ಅವಕಾಶ ಒದಗಿಸಿಕೊಡಲಾಗಿತ್ತು. ಆರೋಪಿತರಿಗೆ ಸದರಿ ದಿನಾಂಕದಂದು ಸಾಯಂಕಾಲ 5-30 ರಿಂದ 5-45 ರವರೆಗೆ ತಮ್ಮ ಕಲೆಯನ್ನು ಪ್ರದರ್ಶಿಸಲು ಕಾಲಾವಕಾಶ ಕಲ್ಪಿಸಿಕೊಡಲಾಗಿತ್ತು. ತದನಂತರ ಸಾಯಂಕಾಲ 5-30 ಗಂಟೆ ಸುಮಾರಿಗೆ ಆರೋಪಿತರಿಗೆ ಕೂಗಿಸಲಾಗಿ ಅವರು ವೇದಿಕೆ ಮೇಲೆ ಬರಲಿಲ್ಲ.  ನಂತರ ಸಾಯಂಕಾಲ 7-00 ಗಂಟೆ ಸುಮಾರಿಗೆ  ಆರೋಪಿತರು ಬಂದು ತಮ್ಮ ಕಲೆಯನ್ನು ಪ್ರದರ್ಶಿಸಲು ನಮಗೆ ಕಾಲಾವಕಾಶ ಕೊಡಬೇಕು ಎಂದು ಗಲಾಟೆ ಮಾಡಲು ಪ್ರಾರಂಭಿಸಿದರು. ಆಗ ವೇದಿಕೆ ಮೇಲೆ ಇದ್ದ ನಾನು, ಚಾಸಾ-3,6 ಮತ್ತು 8 ಕೂಡಿಕೊಂಡು ಆರೋಪಿತರಿಗೆ ಈಗ ಸ್ಥಳಿಯ ಕಲಾವಿದರಿಗೆ ನಿಗದಿಪಡಿಸಿದ ಅವಧಿ ಮುಗಿದಿರುತ್ತದೆ ನಿಮಗೆ ರಾತ್ರಿ 12-00 ಗಂಟೆ ನಂತರ ಅವಕಾಶ ಕಲ್ಪಿಸಿಕೊಡಲಾಗುತ್ತದೆ ಎಂದು ತಿಳಿಸಿ ಹೇಳಿದೇವು.

ತದನಂತರ ರಾತ್ರಿ 12-00 ಗಂಟೆ ಸುಮಾರಿಗೆ ಆರೋಪಿತರಿಗೆ ವೇದಿಕೆಗೆ ಕರೆಯಲಾಗಿ, ಅವರು

ವೇದಿಕೆ ಮೇಲೆ ಬರಲಿಲ್ಲ. ಆಗ ಆರೋಪಿತರೆಲ್ಲರೂ ವೇದಿಕೆ ಮೇಲೆ ಬಂದು ನನ್ನ ಕೈಯಲ್ಲಿಯ ಇದ್ದ ಮೈಕನ್ನು ಆರೋಪಿ ನಂ.1 ರವರು ಕಸಿದುಕೊಂಡು ಅಲ್ಲಿ ನೇರದಿದ್ದ ಸಾರ್ವಜನಿಕರಿಗೆ ಉದ್ದೇಶಿಸಿ ರನ್ನ ವೈಭವದ ಬಗ್ಗೆ ಮತ್ತು ಅಧೀಕಾರಿಗಳ ಬಗ್ಗೆ ಅವಾಚ್ಯ ಶಬ್ದಗಳಿಂದ ಮಾತನಾಡಲು ಪ್ರಾರಂಭಿಸಿದನು. ಆಗ ನಾನು, ಚಾಸಾ-1, 6 ಮತ್ತು 8 ರವರು ಕೂಡಿಕೊಂಡು ಆರೋಪಿತರೆಲ್ಲರಿಗೂ ಬುದ್ದಿ ರೀತಿ ಹೇಳಿದರೂ ಸಹಿತ ಅವರು ಕೇಳದೆ ನಮಗೆ ಅವಾಚ್ಯ ಶಬ್ದಗಳಿಂದ ಬೈದು, ನುಗಿಸ್ಯಾಡಿದರು. ಆರೋಪಿ ನಂ.1,2,5,6 ಮತ್ತು ಇತರರು ಕೂಡಿಕೊಂಡು ನಮಗೆ ಅವಾಚ್ಯ ಶಬ್ದಗಳಿಂದ ಬೈದು ನುಗಿಸ್ಯಾಡಿದ ವ್ಯಕ್ತಿಗಳು ಆಗಿರುತ್ತಾರೆ. ನಂತರ ಸದರಿ ವಿಷಯದ ಕುರಿತು ಚಾಸಾ-1 ರವರು ಆರೋಪಿತರ ವಿರುದ್ಧ ಪಿರ್ಯಾದಿಯನ್ನು ನೀಡಿರುತ್ತಾರೆ. ನಾನು ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿಯ ಹೆಸರು ನಾಮದೇವ ಲಮಾಣಿ ಆಗಿರುತ್ತದೆ (ಆರೋಪಿ ನಂ.2,4 ರಿಂದ 9 ರವರು ಗೈರು ಇದ್ದು, ಅವರ ವಕೀಲರು ಸದರಿ ಆರೋಪಿತರನ್ನು ಗುರುತಿಸುವ ಬಗ್ಗೆ ಯಾವುದೇ ತಕರಾರು ಇರುವುದಿಲ್ಲ ಎಂದು ಕಲಂ 317 ಸಿ.ಆರ್.ಪಿ.ಸಿ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತಾರೆ.)

**ಪಾಟೀ ಸವಾಲು :- ಆರೋಪಿ ನಂ.2 ರಿಂದ 5 ರವರ ಪರ ಶ್ರೀ ಬಿ.ಆರ್.ಡಿ ವಕೀಲರಿಂದ.**

2018 ನೇಸಾಲಿನಲ್ಲಿ ಹಮ್ಮಿಕೊಂಡ ರನ್ನ ಉತ್ಸವದಲ್ಲಿ ನನಗೆ ವೇದಿಕೆಯ ಉಸ್ತುವಾರಿಯನ್ನು ವಹಿಸಿಕೊಡಲಾಗಿತ್ತು ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸ್ಥಳಿಯ ಕಲಾವಿದರಿಗೆ ಸಾಯಂಕಾಲ 5-30 ರಿಂದ 5-45 ಗಂಟೆವರೆಗೆ ತಮ್ಮ ಕಲೆಯನ್ನು ಪ್ರದರ್ಶಿಸಲು ಕಾಲಾವಕಾಶ ನಿಗದಿ ಮಾಡಿರುವ ಬಗ್ಗೆ ಸ್ಥಳಿಯ ಕಲಾವಿದರಾದ ಆರೋಪಿತರಿಗೆ ಮತ್ತು ಇನ್ನೂಳಿದ ಕಲಾವಿದರಿಗೆ ಬರವಣಿಗೆ ಮುಖಾಂತರ ತಿಳಿಸಿರಲಿಲ್ಲ ಎಂದರೆ ಸರಿಯಲ್ಲ. ನಾವು ಸದರಿ ಕಲವಿದರಿಗೆ ಬರವಣಿಗೆಯಲ್ಲಿ ತಿಳಿಸಿದ್ದೇವು ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ತದನಂತರ ಸಾಯಂಕಾಲ 5-30 ಗಂಟೆ ಸುಮಾರಿಗೆ ಸ್ಥಳಿಯ ಕಲಾವಿದರಿಗೆ ಕರೆದಾಗ ಅವರು ವೇದಿಕೆ ಮೇಲೆ ಬರಲಿಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ತದನಂತರ ಸಾಯಂಕಾಲ 7-00 ಗಂಟೆ ಸುಮಾರಿಗೆ ಆರೋಪಿತರು ಮತ್ತು ಸ್ಥಳಿಯ ಕಲಾವಿದರು ನಮ್ಮ ಹತ್ತಿರ ಬಂದು ಅವಕಾಶ ನೀಡಲು ಕೇಳಿಕೊಂಡಾಗ ನಾವು ಅವರಿಗೆ ರಾತ್ರಿ 12-00 ಗಂಟೆ ನಂತರ ಅವಕಾಶ ಕಲ್ಪಿಸಿ ಕೊಡುತ್ತೇವೆ ಎಂದು ಹೇಳಿದೇವು ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ತದನಂತರ ರಾತ್ರಿ 12-00 ಗಂಟೆ ಸುಮಾರಿಗೆ ನಾವು ಸ್ಥಳಿಯವು ಕಲಾವಿದರಿಗೆ ವೇದಿಕೆ ಮೇಲೆ ಕರೆದು ಅವರಿಗೆ ಅವರ ಕಲೆ ಪ್ರದರ್ಶಿಸಲು ಅವಕಾಶ

ಮಾಡಿಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ತದನಂತರ ಆರೋಪಿತರು ವೇದಿಕೆ ಮೇಲೆ ಬಂದು ಅವರ ಪೈಕಿ ಆರೋಪಿ ನಂ.1 ಇವನು ನನ್ನ ಕೈಯಲ್ಲಿನ ಮೈಕನ್ನು ಕಸಿದೂಕೊಂಡು ರನ್ನ ವೈಭವದ ಬಗ್ಗೆ ಮತ್ತು ಅಧೀಕಾರಿಗಳ ಬಗ್ಗೆ ಅವಾಚ್ಯವಾಗಿ ಮಾತನಾಡಿದನು ಎಂದು ಹಾಗೂ ತದನಂತರ ಆರೋಪಿತರೆಲ್ಲರೂ ನಮಗೆ ಅವಾಚ್ಯ ಶಬ್ದಗಳಿಂದ ಬೈದು ನುಗಿಸ್ಯಾಡಿದರು ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ತಮ್ಮ ಕಲೆಯನ್ನು ಪ್ರದರ್ಶಿಸಲು ಅವಕಾಶ ಕೇಳಿದಾಗ ನಾವು ಅದಕ್ಕೆ ನೀರಾಕರಣೆ ಮಾಡಿ ಅವರ ವಿರುದ್ಧ ಒಂದು ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಚಾಸಾ-1 ರವರು ನಮ್ಮ ಮೇಲಾಧೀಕಾರಿಗಳು ಆಗಿರುವುದರಿಂದ ಅವರ ಮಾತು ಕೇಳಿಕೊಂಡು ಸುಳ್ಳು ಸಾಕ್ಷವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ನಂ.3 ಇವನನ್ನು ನಾನು ಇದೇ ಮೊದಲನೆ ಬಾರಿಗೆ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿಯ ಹೆಸರು ಕುಮಾರ ಈಗಪ್ಪ ಪಮ್ಮಾರ ಇರುತ್ತದೆ ಎಂದರೆ ಸರಿ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು )

ಓ ಹೇ ಕೇ ಸರಿ ಇದೆ.

LAGAMA SHIVANAPPA HUKKERI
Digitally signed by LAGAMA SHIVANAPPA HUKKERI
Date: 2026.04.09 13:37:43 +0530

C/C.ಹೆಚ್ಚುವರಿ ದಿವಾಣಿ ನ್ಯಾಯಾಧೀಶರು
ಹಾಗೂ ಜೆಎಂಎಫ್‌ಸಿ ಮುಧೋಳ.

ಸಾಕ್ಷಿಯ ಸಹಿ